ಇಂದ್ರ ವರುಣರೊ ವಾಯು ರುದ್ರರೊ
ಜೀವಕರುಣ ಸಮುದ್ರರು.
ಅಭಯಹಸ್ತರೊ ದಂಡಹಸ್ತರೊ?
ವರದರವರು ಸಮಸ್ತರು!

ವೇದದೇವರ ತುಳಿಯಲೆದ್ದಿದೆ
ವಾದದೇವರ ಪೀಳಿಗೆ–
ಕುಸಿಯೆ ನೆಲ, ಬಾಯ್ಬಿಡಲು ಬಾಂದಳ.
ದಿಟ್ಟಿಸುತ್ತಿದೆ ದಾಳಿಗೆ–
ಹೊಳೆ ಜೀವವು, ಬಾಳೆಹೆಣಗಳು,
ರೋಷಘೋಷದ ಭೂತಗಣಗಳು–



ಬೊಬ್ಬಿರಿಯೆ ಹಬ್ಬಿದೆ ಭಯಜ್ವರ
ಭೂತಧಾತ್ರಿಯ ಗರ್ಭಕೆ–
ಬುದ್ಧಿ ತಲೆಕೆಳಗಾಗಿ ಬಿದ್ದಿದೆ
ಸರ್ವಸಮತೆಯ ಸಿದ್ಧಿಗೆ.

ಒಡೆದುದಣು–ವಿಷರೇಣು ಹೊಡೆದಿದೆ
ಬ್ರಹ್ಮಸೃಷ್ಟಿಯ ಬೇರಿಗೆ.
ಗ್ರಹಗಳೂ ಹೆಗಲೊಡ್ಡಿ ನಿಂತಿವೆ
ಇಳೆಯ ಪಾಪದ ಹೇರಿಗೆ.
ನವಯುಗದ ನವವಿಶ್ವಕರ್ಮರು–
ತಮಗೆ ತಾವೆ ಕೃತಾಂತಕರ್ಮರು–
ಏಳು ಜೀವನೆ! ಏಳು ದೇವನೆ!
ನಿನಗೆ ನೀನೇ ನಾಥನು!
ಇಂದಿಗೂ ಮುಂದೆಂದಿಗೂ ಅಂ–
ದಂದಿಗೂ ಪರಿಪೂತನು!

ಹಿಮಗಿರಿಯ ನೆತ್ತಿಯನು ಭೇದಿಸಿ
ಧುಮುಕೆ ಬೆಂಕಿಯ ತೊರೆಗಳು,
ಸೊಕ್ಕಿ ತಾಂಡವವಾಡದಿರುವುವೆ
ಕಡಲ ನೆತ್ತರ ತೆರೆಗಳು?
ಅಸ್ಥಿಮಂಟಪ–ಕರುಳತೋರಣ–
ಶಕ್ತಿಯುತ್ಸವ–ಮಂತ್ರ–ಮಾರಣ–
ಪ್ರೇತದೇವನ ವಿಜಯಯಾತ್ರೆಗೆ
ಏಕಸೂತ್ರತೆಯೋರಣ.
ಹೊಟ್ಟೆಯೊಡೆತನ–ಬಗೆಯ ಬಡತನ–
ಆತ್ಮ ಬಲಿಯ ಸಮರ್ಪಣ.
ಹರಿಯ ಶಂಖವೆ! ಹರನ ಢಕ್ಕೆಯೆ!
ಗುಡಗನೆಬ್ಬಿಸಿ ಮೊಳಗಿಸಿ!
ವಾಣಿ! ವೀಣೆಯ, ಶಿವೆ! ಕೃಪಾಣವ
ಮಿಂಚು ಸಿಡಿಲಲಿ ಮುಳುಗಿಸಿ!
ಧರ್ಮವೇ ಜೀವನದ ದುರ್ಗವು,
ಮಾತೃಧರೆ ಸ್ವರ್ಗಾಪವರ್ಗವು,
ದುಷ್ಟದೇವರ ತಂಡತಂಡವ
ಕಿತ್ತು ಕಳೆಯುವ ಸಂಗರ–
ತತ್ತ್ವಸಂಗರ–ಸತ್ತ್ವಸಂಗರ
ಜೀವಿತಕಿದೊ ಡಂಗುರ!

(ಪತ್ರ ಪುಷ್ಪ, 1960)